ಸತ್ರ ಪ್ರಕರಣ ಸಂಖ್ಯೆ:

| | |
|---|---|
| ಫ್ರಾಸಾ | 09 |
| ಚಾಸಾ | 12 |

ಕರ್ನಾಟಕ ಸರ್ಕಾರ (ಸಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ:57)
ನಮೂನೆ ಸಂಖ್ಯೆ4
(ಸಿವಿಲ್)

## 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಬಳ್ಳಾಪುರ

## ಸತ್ರ ಪ್ರಕರಣ ಸಂಖ್ಯೆ:27/2025

**ದಿನಾಂಕ:05.06.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಿತು.**

| | | |
|---|---|---|
| ಸಾಕ್ಷಿದಾರರ ಹೆಸರು | : | ಆರ್.ಜಗದೀಶ್ ರೆಡ್ಡಿ |
| ತಂದೆಯ ಹೆಸರು | : | ಲೇಟ್ ರಾಮಚಂದ್ರ ರೆಡ್ಡಿ |
| ವಯಸ್ಸು | : | 57 ವರ್ಷ |
| ಉದ್ಯೋಗ | : | ಪೋಲಿಸ್ ನಿರೀಕ್ಷಕರು ಬಿ ಎಂ ಟಿ ಎಫ್ ಬೆಂಗಳೂರು |
| ವಾಸಸ್ಥಳ | : | ಬೆಂಗಳೂರು |

**ಮುಖ್ಯ ವಿಚಾರಣೆ: ಸಾರ್ವಜನಿಕ ಅಭಿಯೋಜಕರಿಂದ:-**

**1.** ನಾನು ದಿನಾಂಕ 19-02-2018 ರಿಂದ 10-10-2019 ರವರೆಗೆ ಚಿಂತಾಮಣಿ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪೋಲಿಸ್ ಉಪ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿದ್ದೇನು.

2. ದಿನಾಂಕ 20-12-2018 ರಂದು ತಾಲೂಕು ಆರೋಗ್ಯ ಅಧಿಕಾರಿಗಳಿಗೆ ಖಚಿತ ಮಾಹಿತಿ ಬಂದ ಮೇರೆಗೆ ತಾಲೂಕು ಉಪ ವಿಭಾಗ ಅಧಿಕಾರಗಳಾದಂತಹ

ಸತ್ರ ಪ್ರಕರಣ ಸಂಖ್ಯೆ:

| | |
|---|---|
| ಫ್ರಾಸಾ | 09 |
| ಚಾಸಾ | 12 |

ಅಶೋಕ್ ತೇಲಿ ರಮರ ಮೈಲಾಂಡ್ಲ ಹಳ್ಳಿ ಗ್ರಾಮಕ್ಕೆ ತೆರಳಿ ದಾಳಿ ನಡೆಸಲು ರಕ್ಷಣೆ ನೀಡಲು ಕೋರಿಕೆ ಸಲ್ಲಿಸಿದ ಮೇರೆಗೆ ನಾನು ಮೇಲಾಧಿಕಾರಿಗಳಿಂದ ದೂರವಾಣಿ ಮುಖಾಂತರ ಅನುಮತಿ ಪಡೆದು ಠಾಣಾ ಸಿಬ್ಬಂಧಿಗಳಾದ ಸಿಹೆಚ್ ಸಿ 87 ಚಂದ್ರ ಶೇಖರ್ , WPC-334 ಸುನೀತಾ ಚಾಸಾ-11, ಇಲಾಖಾ ಜೀಪ್ ನಂಬರ್ ಕೆಎ-40 ಜಿ-326,ಮಾನ್ಯರು ಸೂಚಿಸಿದಂತೆ ಅವರನ್ನು ಹಿಂಬಾಲಿಸಿಕೊಂಡು ಬೆಳಿಗ್ಗೆ 11-30 ಗಂಟೆಗೆ ಠಾಣೆಯಿಂದ ತೆರಳಿ ಮೈಲಾಂಡ್ಲ ಹಳ್ಳಿ ಕ್ರಾಸ್ ಬಳಿ ತೆರಳಿದ್ದಾಗ ಮಾನ್ಯರೊಂದಿಗೆ ಟಿಹೆಚಓ,  ಆರೋಗ್ಯ ಅಧಿಕಾರಿಗಳು, ವೈಧ್ಯರುಗಳು ದಾಳಿಯಲ್ಲಿ ಭಾಗಿಯಾಗಿರುತ್ತಾರೆ. ದಾಳಿ ಮಾಡಿದಾಗ ಆರೋಪಿ ಇಟ್ಟುಕೊಂಡಿದ್ದ ಕ್ಲಿನಿಕ್ ನಲ್ಲಿ ಅನಧಿಕೃತ ಔಷಧಿಗಳು ಮತ್ತು ಸಲಕರಣೆಗಳು ಕಂಡು ಬಂದಿದ್ದು, ಅವುಗಳನ್ನು ವಶಪಡಿಸಿಕೊಳ್ಳುವ ಸಮಯದಲ್ಲಿ ಪಂಚರಾದ ಫ್ರಾಸಾ-5 ಎಸ್.ವಿ ಮಂಜುನಾಥ, ಫ್ರಾಸಾ-6 ಹೆಚ್ ಎಂ ಮಂಜುನಾಥ , ಫ್ರಾಸಾ-8 ವೆಂಕಟೇಶ್ ರವರ ಸಮಕ್ಷಮದಲ್ಲಿ ಮಧ್ಯಾಹ್ನ 12-00 ಗಂಟೆಯಿಂದ 02-00 ಗಂಟೆಯ ವರೆಗೆ ಆರೋಗ್ಯ ಅಧಿಕಾರಿಗಳು ಪಂಚನಾಮೆಯ ಪ್ರಕ್ರಿಯೆಯನ್ನು ನಡೆಸಿ, ಅವರ ವಶದಲ್ಲಿದ್ದ ಔಷಧಿಗಳಾದ 1. Neurobion injection-01, 2. Hydrozen Peroxide 01 bottle, 3. Taxim 250. 02 bottle, 4.  Almox

ಸತ್ರ ಪ್ರಕರಣ ಸಂಖ್ಯೆ:

| | |
|---|---|
| ಫ್ರಾಸಾ | 09 |
| ಚಾಸಾ | 12 |

500 mg, 112 tablets, 5. Repiscelide 12 tablets, 6. Disporan Syrings 2ml- Nos.50, 7) Trax-01 T 250 mg INJ-01, 8) Cipladene Ontment 250 Grm 01-bottle, 9) Intolen Powder-01 bottle, 10) Eye drops Ciplox-01 bottle, 11) Meftal Spces 250 mg 20-tablets, 12) Merival 650 mg 85 tablets, 13) Almox DT 250 mg 85 tablets, 14) Pesticillin 500 mg 10 tablets, 15) Tetracycline 500 mg 10 tablets, 16) Rantac INJ 22 Hample, 17) Avil 2ML 8 INJ, 18) Rantac 150 mg 156 tablets, 19) Loper 2 mg 400 tables, 20) Asthalip 4 mg 44 tablets, 21) Famonext 40 mg 55 tablets, 22) Pantaprazole 40 mg, 30 tablets, 23) Betnasol 11 Hample, 24) Dexona 0.5 mg, 90 tablets, 25) Metroga 400 mg, 46 tablets, 26) INJ Nemycin-01, 27) Lamination Cerctificate Xerox copy-01, 28) INJ Victotal-01, 29) Stethoscope-01, 30) INJ Paracetamol-02, 31) Dizital BP Apparater-01, 32) INJ Chaivitalo-02, 33) INJ Amlab-01, 34) INJ Atrropine 10ML-01, 35) CPM INJ 2 Vails,

36) INJ Dexona 1 Vails, 37) INJ L Vit 12.2, 38) INJ Zino Cain3 30ml-01 bottle, 39) INJ CPM-01, 40) INJ Avil-01, 41) Needles 23G Disporan-150, 42) Okacet 30 tablets, 43) INJ Dexalab02 vails, ಸಲಕರಣೆಗಳು ಹಾಗೂ ಆರೋಪಿಯನ್ನು ವರದಿಯೊಂದಿಗೆ ನನ್ನ ಮುಂದೆ ಹಾಜರುಪಡಿಸಿರುತ್ತಾರೆ. ವರದಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-01 ಎಂದು ಗುರುತಿಸಲಾಗಿರುತ್ತದೆ. ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ವರದಿಯ ಆಧಾರದ ಮೇಲೆ ಠಾಣಾ ಮೊಕದ್ದಮೆ ಸಂಖೆ. 494/2018 ರಂತೆ ಕಲಂ 328, 420 IPC ಹಾಗೂ 15 IMC Act ನಂತೆ ಪ್ರಕರಣ ದಾಖಲಿಸಿಕೊಂಡಿರುತ್ತೇನೆ. ಪ್ರ.ವರ್ತಮಾನ ವರದಿಯ ಮೂಲ ಪ್ರತಿಯನ್ನು ಮಾನ್ಯ ನ್ಯಾಯಾಲಯಕ್ಕೆ ಪ್ರತಿಗಳನ್ನು ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ಪ್ರ.ವರ್ತಮಾನ ವರದಿ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಸದರಿ ದಾಖಲೆಗಳನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-6 ಎಂದು, ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು. ವಶಪಡಿಸಿಕೊಂಡ ಮಾಲುಗಳನ್ನು ಠಾಣಾ ಸ್ವತ್ತು ಪಟ್ಟಿ ಸಂಖ್ಯೆ 289/2018 ರಂತೆ

| | |
|---|---|
| ಫ್ರಾಸಾ | 09 |
| ಚಾಸಾ | 12 |

ಅಳವಡಿಸಿಕೊಂಡು ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸದರಿ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಸದರಿ ವಸ್ತುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಮು.ಮಾ.01 ರಿಂದ ಮು.ಮಾ.43 ಎಂದು ಗುರುತಿಸಲಾಗಿರುತ್ತದೆ. ನಂತರ ಆರೋಪಿಯ ಸ್ವ ಇಚ್ಛಾ ಹೇಳಿಕೆಯನ್ನು ಮಾಡಿಕೊಂಡಿರುತ್ತೇನೆ. ನಂತರ ಆರೋಪಿಯನ್ನು ದಸ್ತಗಿರಿಗೆ ಒಳಪಡಿಸಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿಯಮಾವಳಿಗಳನ್ನು ಪಾಲಿಸಿರುತ್ತೇನೆ. ಸಾಕ್ಷಿಯು ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ನಂತರ ಆರೋಪಿಯ ವೈದ್ಯಕೀಯ ತಪಾಸಣೆ ನಡೆಸಲು ಕೋರಿಕೆ ಪತ್ರದೊಂದಿಗೆ ಸಿಹೆಚ್.ಸಿ-200 ಇಜಾಜ್ ಪಾಶಾ ರವರ ಭದ್ರಿಕೆಯಲ್ಲಿ ಕಳುಹಿಸಿಕೊಟ್ಟಿರುತ್ತೇನೆ. ನಂತರ ಸಾಕ್ಷಿದಾರರಾದ ಚಾಸಾ-2 ಅಶೋಕ್ ತೇಲಿ, ಚಾಸಾ-3 ಡಾ. ಬೈರಾ ರೆಡ್ಡಿ , ಫ್ರಾಸಾ-3 ಶ್ರೀನಿವಾಸ ರೆಡ್ಡಿ, ಫ್ರಾಸಾ-7 ಡಾ.ಸುಮಾ , ಫ್ರಾಸಾ-2 ಡಾ. ಸುಜಾತ , ಫ್ರಾಸಾ-8 ವೆಂಕಟೇಶ್, ಫ್ರಾಸಾ-5 ಎಸ್ ವಿ ಮಂಜನಾಥ, ಫ್ರಾಸಾ-6 ಹೆಚ್ ಎಂ ಮಂಜುನಾಥ , ಸಿಬ್ಬಂಧಿಗಳಾದ ಚಾಸಾ-10 ಹೆಚ್ ಸಿ 87 ಚಂದ್ರ ಶೇಖರ್, ಚಾಸ-11 ಸುನೀತಾ WPC-334 ರವರ ಹೇಳಿಕೆಗಳನ್ನು ಮಾಡಿಕೊಂಡಿರುತ್ತೇನೆ. ಫ್ರಾಸಾ-5 ಎಸ್ ವಿ ಮಂಜುನಾಥ ನಿಪಿ-3 ರಂತೆ , ಫ್ರಾಸಾ-6 ಹೆಚ್ ಎಂ. ಮಂಜುನಾಥ ನಿಪಿ-4 ರಂತೆ , ಫ್ರಾಸಾ-8 ವೆಂಕಟೇಶ್

ನಿಪಿ-5 ರಂತೆ , ನನ್ನ ಮುಂದೆ ಹೇಳಿಕೆ ನೀಡಿರುತ್ತಾರೆ. ನಂತರ ದಿ.21-12-2018 ರಂದು ಆರೋಪಿಯ ವಿರುದ್ಧ ರಿಮ್ಯಾಂಡ್ ವರದಿಯನ್ನು ತಯಾರಿಸಿ ಮಾನ್ಯ ನ್ಯಾಯಾಲಯದ ಮುಂದೆಹಾಜರುಪಡಿಸುವಂತೆ ಸಿಬ್ಬಂಧಿಯವ ಭದ್ರಿಕೆಯಲ್ಲಿ ಕಳುಹಿಸಿಕೊಟ್ಟಿರುತ್ತೇನೆ. ದಿ.14-01-2019 ರಂದು ಅಸಿಸ್ಟೆಂಟ್ ಡ್ರಗ್ ಕಂಟ್ರೋಲರ್ ಆಫೀಸ್ ಆಫ್  ಅಸಿಸ್ಟೆಂಟ್ ಡ್ರಗ್ ಕಂಟ್ರೋಲರ್ ಚಿಕ್ಕಬಳ್ಳಾಪುರ ರವರಿಗೆ ಅಮಾನತ್ತು ಪಡಿಸಿಕೊಂಡಿರುವ ಔಷಧಿ ಮಾತ್ರೆಗಳನು ನೀಡಿದರೆ ಮಾನವನಿಗೆ ಆಘಾತ ಉಂಟಾಗುವ ಸಾಧ್ಯತೆ ಇರುತ್ತದೆಯೇ ಎಂಬ ಬಗ್ಗೆ ವರದಿ ನೀಡುವಂತೆ ಕೋರಿಕೆ ಪತ್ರ ಸಲ್ಲಿಸಿರುತ್ತೇನೆ. ದಿ.03-03-2019 ರಂದು ಆರೋಗ್ಯ ತಾಲೂಕು ಅಧಿಕಾರಿಯವರು ಚಿಂತಾಮಣಿಯವರು ಆರೋಪಿಯಿಂದ ವಶಪಡಿಸಿಕೊಂಡ ಔಷಧಿಗಳನ್ನು ಬಳಸಲು ಅರ್ಹನಲ್ಲ ಹಾಗೂ ಅರಿವಿಲ್ಲದೇ ಔಷಧಿ ನೀಡಿರುವುದರಿಂದ ಅಡ್ಡ ಪರಿಣಾಮಗಳು ಉಂಟಾಗುವ ಸಾಧ್ಯತೆ ಇರುತ್ತದೆ ಎಂದು ವರದಿ ನೀಡಿರುತ್ತಾರೆ. ಸದರಿ ವರದಿಯನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿಯು ಸದರಿ ವರದಿಯನ್ನು ನೋಡಿ ಗುರುತಿಸಿ ನಿಪಿ-7 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು. ಸಾಕ್ಷಿಯ ಆಧಾರಗಳ ಆಧಾರದ ಮೇಲೆ ಆರೋಪಿಯ ಮೇಲೆ ಆರೋಪ ಮೇಲ್ನೋಟಕ್ಕೆ

ಕಂಡುಬಂದಿದ್ದರಿಂದ ಆರೋಪಿಯ ವಿರುದ್ಧ ದೋಷರೋಪಟಣೆ ಪಟ್ಟಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್.ಆರ್.ಬಿ.ವಕೀಲರಿಂದಃ**

3. ಸಾಕ್ಷಿಗೆ ಸದರಿ ದಿನ ನೀವು ಮೈಲಾಂಡ್ಲ ಹಳ್ಳಿ ಕ್ರಾಸ್ ಗೆ ಹೋಗಿದ್ದೀರಾ? ಎಂದರೆ ಸಾಕ್ಷಿಯು ಹೌದು ಎಂದು ನುಡಿದಿರುತ್ತಾರೆ. ಸ್ಥಳದಲ್ಲಿ ದೂರನ್ನು ನನಗೆ ನೀಡಲಿಲ್ಲ. ಆದರೆ ಠಾಣೆಯಲ್ಲಿ ನೀಡಿರುತ್ತಾರೆ. ನಿಪಿ-2 ಮಹಜರ್ ನಲ್ಲಿ ನನ್ನ ಸಹಿ ಇಲ್ಲ ಎಂದರೆ ಸರಿಯಲ್ಲ. ಟಿ ಹೆಚ್ ಓ ಮತ್ತು ಇತರೆ ವೈದ್ಯಾಧಿಕಾರಿಗಳು ದಾಳಿಗೆ ಪೂರ್ವದಲ್ಲಿ ಯಾವುದೇ ದೂರು ನೀಡಿರಲಿಲ್ಲ ಎಂದರೆ ಸರಿ . ನಾನು ಪ್ರತ್ಯೇಕವಾಗಿ ಕೃತ್ಯ ನಡೆದಿದೆ ಎಂದು ಹೇಳುವ ಸ್ಥಳದಲ್ಲಿ ಮಹಜರ್ ನ್ನು ಜರುಗಿಸಿರುವುದಿಲ್ಲ. ಆದರೆ ಮಹಜರ್ ಸಮಯದಲ್ಲಿ ನಾನು ಪಾಲ್ಗೊಂಡಿದ್ದೆ. ಮಹಜರ್ ನಡೆಯುುವ ಕಾಲಕ್ಕೆ ನನಗೆ ಯಾರು ದೂರು ನೀಡಿರಲಿಲ್ಲ ಮತ್ತು ಇರಲಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ದಾಳಿಯ ಸಮಯದಲ್ಲಿ ಭದ್ರಿಕೆ ನೀಡುವಂತೆ ಕೋರಿದ್ದರು, ಅದರಂತೆ ನಾನು ನೀಡಿರುತ್ತೇನೆ. ಮು.ಮಾ.01 ರಿಂದ ಮು.ಮಾ.43 ವಸ್ತುಗಳನ್ನು ವೈದ್ಯಾಧಿಕಾರಿಗಳಾದ ರಾಮಚಂದ್ರ ರೆಡ್ಡಿ ರವರು ಠಾಣೆಗೆ ಬಂದು ನನಗೆ

ನೀಡಿರುತ್ತಾರೆ. ನಾನು ಕೃತ್ಯ ನಡೆದಿದೆ ಎಂದು ಹೇಳಲಾದ ಸ್ಥಳವಾದ ಮೈಲಾಂಡ್ಲ ಹಳ್ಳಿಗೆ ಹೋಗಿರಲಿಲ್ಲ, ಮತ್ತು ಮು.ಮಾ.01 ರಿಂದ ಮು.ಮಾ.43 ವಸ್ತುಗಳನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಫ್ರಾಸಾ-1 ರಾಮಚಂದ್ರ ರೆಡ್ಡಿರವರು ಮು.ಮಾ.01 ರಿಂದ ಮು.ಮಾ.43 ವಸ್ತುಗಳನ್ನು ಸೃಷ್ಠಿಸಿ ಬಣವಟ್ಟು ಮಾಡಿ ನನ್ನ ಮುಂದೆ ಹಾಜರುಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಗೂ ಮತ್ತು ಸದರಿ ವಸ್ತುಗಳಿಗೂ ಯಾವುದೇ ಸಂಂಧ ಇಲ್ಲ ಎಂದರೆ ಸರಿಯಲ್ಲ. ಆರೋಪಿ ನನಗೆ ಯಾವುದೇ ಸ್ವ ಇಚ್ಛಾ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಯಾವುದೇ ಸಾಕ್ಷಿದಾರರು ನನ್ನ ಮುಂದೆ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಕೃತ್ಯ ನಡೆದ ಸ್ಥಳ ಯಾರಿಗೆ ಸಂಬಂಧಿಸಿದ್ದು ಎಂದು ಸಂಬಂಧಪಟ್ಟ ಅಧಿಕಾರಿಗಳಿಂದ ದಾಖಲೆ ಪಡೆದಿಲ್ಲ ಎಂದರೆ ಸರಿ. ಆದರೆ ಅದರ ಮಾಲೀಕ ತಿಪ್ಪರಾಜುರವರು ಆಗಿರುತ್ತಾರೆ. ಸದರಿ ಕಟ್ಟಡ ತಿಪ್ಪರಾಜು ರವರಿಗೆ ಸಂಬಂಧಿಸಿದ್ದು ಎಂದು ತೋರಿಸಲು ಯಾವುದೇ ಆಧಾರ ಇಲ್ಲ ಎಂದರೆ ಸರಿ. ತಿಪ್ಪರಾಜು ಎಂಬುವವರನ್ನು ನಾನು ವಿಚಾರಣೆ ಮಾಡಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಮಹಜರ್ ಸಮಯದಲ್ಲಿ ನಾನು ಆತನನ್ನು ವಿಚಾರಣೆ ಮಾಡಿರುತ್ತೇನೆ. ಆಗ ಆತ ಸದರಿ ಕಟ್ಟಡ ತನ್ನದ್ದು ಎಂದು ಹೇಳಿರುತ್ತಾರೆ. ಆ ಬಗ್ಗೆ ದೋಷರೋಪಣೆ ಪಟ್ಟಿಯಲ್ಲಿ ಕಂಡು ಬಂದಿರುವುದಿಲ್ಲ

| | |
|---|---|
| ಫ್ರಾಸಾ | 09 |
| ಚಾಸಾ | 12 |

ಎಂದರೆ ಸರಿ. ಸದರಿ ಕಟ್ಟಡ ತಿಪ್ಪರಾಜು ರವರದ್ದು ಎಂದು ಊಹೆಯ ಮೇಲೆ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯ ವಿರುದ್ಧ ಯಾವುದೇ ಆರೋಪ ತನಿಖೆಯಲ್ಲಿ ಕಂಡು ಬರದೆ ಇದ್ದರು ಉದ್ದೇಶ ಪೂರ್ವಕವಾಗಿ ಸುಳ್ಳು ದೋಷರೋಪಣೆ ಪಟ್ಟಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಕಲಿ ವೈದ್ಯರಿಗೆ ಭಯ ಬರಲಿ ಎಂಬ ಉದ್ದೇಶದಿಂದ ಆರೋಗ್ಯ ಇಲಾಖೆಯವರು ಆಗ್ಗಾಗ್ಗೆ ಸುಳ್ಳು ದೂರುಗಳನ್ನು ನೀಡುತ್ತಿರುತ್ತಾರೆ ಎಂದರೆ ಸರಿಯಲ್ಲ. ಆ ಕಾರಣದಿಂದ ಆರೋಪಿಯ ವಿರುದ್ಧ ಸುಳ್ಳು ದೂರನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿ ಯಾವುದೇ ರೀತಿಯ ವೈದ್ಯ ವೃತ್ತಿಯನ್ನು ನಡೆಸುತ್ತಿರಲಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

**(ದಿನಾಂಕಃ05.06.2026 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓದಿ ಹೇ ಕೇ ಸರಿ ಇದೆ**

**ಸಹಿ/-**

**(ಕಾಂತರಾಜು.ಎಸ್.ವಿ.)**
**2 ನೇ ಹೆಚ್ಚುವರಿ ಜಿಲ್ಲಾ ಮತ್ತು (ವಿಶೇಷ) ಸತ್ರ ನ್ಯಾಯಾಧೀಶರು,**
**ಚಿಕ್ಕಬಳ್ಳಾಪುರ (ಕಾರ್ಯಸ್ಥಾನ ಚಿಂತಾಮಣಿ)**